SEARCHING THE MISSING SMT. SUMITRA DESAI

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ) :— ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರದ ಚುನಾಯಿತ ಸದಸ್ಯರಾಗಿರುವ ನಮಗೆ ಒಂದು ಕಷ್ಟ ಬಂದಿದೆ. ಬೆಂಗಳೂರು ನಗರದಲ್ಲಿ ಎಲ್ಲಿ ಹೋದರೂ ಪ್ರತಿಯೊಬ್ಬರೂ ಕೂಡ ಕಣ್ಮರೆಯಾದ ಯುವತಿಯ ಬಗ್ಗೆ ಏನು ಆಯಿತು, ಏನು ವಿಚಾರಣೆ ಮಾಡಿದಿರಿ, ಮಂತ್ರಿಗಳೇ ಹೀಗೆ ಮಾಡಿದ ಮೇಲೆ ದೇಶವನ್ನು ರಕ್ಷಣೆ ಮಾಡುವವರು ಯಾರು ಎಂದು ನಮ್ಮನ್ನು ಕೇಳುತ್ತಾ ಇದ್ದಾರೆ. ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು, ಮಾನ್ಯ ಚನ್ನ ಬಸಪ್ಪನವರೂ ಕೂಡ ಹೇಳಿದರು, ನಾಳೆ ದಿವಸ ಈ ಸಭೆಯು ಮುಗಿಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ, ಇದುವರೆಗೂ ಹೇಳಿಕೆಯನ್ನು ತಾವುಗಳು ಕೊಡಲಿಲ್ಲ, ಪತ್ರಿಕೆಗಳಲ್ಲಿ ವಿಷದವಾಗಿ ಕೊಟ್ಟಿದ್ದಾರೆ, ಸ್ಟೇಟ್ ನಟಿಯರೊಬ್ಬರು ಮಾಡಿರತಕ್ಕ ಅನ್ಯಾಯವನ್ನು ಯಾರೂ ಸಹಿಸುವುದಕ್ಕಾಗುವುದಿಲ್ಲ. ಯಥಾ ರಾಜಾ ತಥಾಃ ಪ್ರಜಾ, ಮಂತ್ರಿಗಳೇ ಹೀಗಾದರೆ ಪ್ರಜೆಗಳ ಗತಿಯೇನು ? ನೀವು ನೀತಿವಂತರೇ ? ಅನೀತಿವಂತರೇ ? ನಿಮಗೆ ನ್ಯಾಯ ಇಲ್ಲವೇ ?. ನೀವೇ ಈ ರೀತಿ ನಡೆಯುವುದಾದರೆ ಜನ ಹೇಗೆ ಸುಧಾರಿಸುವುದಕ್ಕಾಗುತ್ತದೆ? ಆ ಸ್ಥಳ ದಲ್ಲಿ ಮಂತ್ರಿಗಳಾಗಿ ಕೂತು ಕೊಳ್ಳುವುದಕ್ಕೆ ನಿವ ಗೆ ಯೋಗ್ಯತೆ ಇದೆಯೇ ಎಂದು ನಾನು ತಿಳಿದು ಕೊಳ್ಳಬೇಕಾಗಿದೆ. ದಯವಾಡಿ ಸರಿಯಾದ ರೀತಿಯಲ್ಲಿ ಉತ್ತರ ವನ್ನು ಮಾನ್ಯ ಚೆನ್ನ ಬಸಪ್ಪನವರಾಗಲೀ, ಮುಖ್ಯಮಂತ್ರಿಗಳಾಗಲೀ ಕೊಟ್ಟು ಜನತೆಯನ್ನು ಸಮಾಧಾನ ಮಾಡಬೇಕು. ತಪ್ಪು ಆಗಿದ್ದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :— ತಪ್ಪಿತಸ್ಥರು ಎಂದು ಪ್ರೂವ್ ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿಲ್ಲ, ಜಂಟಿ ಜವಾಬ್ದಾರಿ ಇದೆಯೆಂದು ಸಿದ್ದವೀರಪ್ಪನವರು, ಚನ್ನಬಸಪ್ಪನವರ ಪರವಾಗಿ ಉತ್ತರ ಕೊಡು ತ್ತಿದ್ದರು ಮತ್ತು ಒಬ್ಬ ಮಂತ್ರಿಗಳು ಇನ್ನೊಬ್ಬರ ಪರವಾಗಿ ಉತ್ತರ ಕೊಡು ತ್ತಿದ್ದರು, ಆದುದರಿಂದ ಅವರದು ತಪ್ಪು ಆಗಿದ್ದರೆ ಅವರು ಒಬ್ಬರೇ ರಾಜೀನಾಮೆ ಕೊಡಬೇಕು ಎಂದಲ್ಲ ಎಲ್ಲರೂ ರಾಜೀನಾಮೆ ಕೊಡಬೇಕು. ಚನ್ನಬಸಪ್ಪನವರಿಗೆ ಸಿದ್ದವೀರಪ್ಪನವರಿಗೆ ಕಾನೂನು ಗೊತ್ತಿದೆ, ಜಂಟಿ ಜವಾಬ್ದಾರಿ ಇರುವುದರಿಂದ ಎಲ್ಲರೂ ರಾಜೀನಾಮೆ ಕೊಡಬೇಕೆಂದು ತಿಳಿಯಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ ( ಚಾಮರಾಜಪೇಟೆ ) :— ಈ ಒಂದು ಅಧ್ಯಾಯ ಬರೀ ರಾಜ್ಯದ ಜನತೆಯ ಗಮನವನ್ನು ಸೆಳೆದಿಲ್ಲ, ಇಡೀ ದೇಶದ ಜನತೆಯ ಗಮನವನ್ನು ಸೆಳೆದಿದೆ. ಸಂಪೂರ್ಣವಾಗಿ ಅಂಕಿ ಅಂಶಗಳನ್ನು ಸಂಗ್ರ

(ಶ್ರೀ ವಾಟಾಳ್ ನಾಗರಾಜ)

ಹಿಸಿಕೊಂಡು ಬಂದಿದ್ದೇನೆ. ಅದು ಎಲ್ಲಾ ಸತ್ಯವಾಗಿ ನಡೆದದ್ದು. ಶ್ರೀಮಾನ್ ಕಂತ್ರಾರ್‌ರವರ ಮನೆಯಲ್ಲಿ ಸುಮಿತ್ರ ದೇಸಾಯಿ ಇದ್ದರು ನಿಜ. ಮನೆಯಲ್ಲಿ ಗಲಾಟೆ ಆದಾಗ ಎಲ್ಲಿ ಅಪಮಾನ ಆದೀತು ಎನ್ನುವ ದೃಷ್ಟಿಯಿಂದ ಆಕೆಗೆ ಬುದ್ಧಿಭ್ರಮಣೆ ಆಗಿದೆ ಎಂದು ಹೇಳಿದ್ದಾರೆ. ಈವೊತ್ತು ಸರಿಯಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು :.... ಹಾಗಾದರೆ, ನಿನ್ನೆ ತಪ್ಪಾಗಿ ಊಹೆಯ ಮೇಲೆ ಹೇಳಿದ್ದಿರೇನು ?

ಶ್ರೀ ವಾಟಾಳ್ ನಾಗರಾಜ್ :.... ನಾನು ನಿನ್ನೆ ಸಚಿವರ ಹೆಸರು ಹೇಳಿದ್ದೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಹೇಳಿಕಳುಹಿಸಿದಾಗ ಪೋಲೀಸ್ ಅಧಿಕಾರಿಗಳು ಯಾವುದೊ ರೂಲ್ಸ್ ಪ್ರಕಾರ ಆಕೆಯನ್ನು ದಸ್ತಗಿರಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಕ್ಷೇಮವಾಗಿದು ಹೋದಾಗ ಹೆಡ್‌ಕಾನ್ ಸ್ಟೇಬಲ್‌ನ್ನು ಕರೆಸಿ ಆಕೆಯನ್ನು ಬಲವಂತದಿಂದ ಕರೆದುಕೊಂಡು ಹೋಗಿದ್ದಾರೆ. ಆ ಆಶ್ರಮ ಯಾವುದು ಎಂದರೆ ಹುಚ್ಚರನ್ನು ಸೇರಿಸತಕ್ಕ ಆಶ್ರಮ. ಅಲ್ಲಿ ಹೋಗಿ ಕೇಳಿದಾಗ ಈಕೆಗೆ ಹುಚ್ಚು ಹಿಡಿದಿಲ್ಲ, ಹುಚ್ಚು ಹಿಡಿಯದೇ ಇರತಕ್ಕ ಮಹಿಳೆಯನ್ನು.....

ಅಧ್ಯಕ್ಷರು ;– ಅದೆಲ್ಲಾ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ :– ಪೇಪರ್‌ನಲ್ಲಿ ಬಂದಿದೆ, ಅದನ್ನು ನೀವು ನಂಬುವುದಿಲ್ಲ, ನನ್ನ ಮಾತು ನಂಬಬೇಕು. ಈವೊತ್ತು ಈ ರಾಜ್ಯದಲ್ಲಿ ಏನಾದರೂ ಒಂದು ಮಂತ್ರಿಮಂಡಲ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಅಮೇರಿಕಾದಲ್ಲಿ '.ವಾಟರ್‌ಗೇಟ್'' ಪ್ರಕರಣ ಆಯಿತು. ಇಲ್ಲಿ '.ಬನ್ನೇರು'' ಗುಟ್ಟದಲ್ಲಿ ಆಶ್ರಮ ಇದೆ, ಇಲ್ಲಿ '.ಬನ್ನೇರು ಗೇಟ್'' ಪ್ರಕರಣ ಪ್ರಾರಂಭವಾಗಿದೆ. ಮಂತ್ರಿ ಮಂಡಲದಲ್ಲಿ ನೈತಿಕವಾಗಿ ಇರುವುದಾದರೆ ನಿಜವಾಗಿ ಚನ್ನಬಸಪ್ಪನವರು ಆಗಲೀ ಸಿದ್ದವೀರಪ್ಪನವರು ಆಗಲೀ ನಿಮ್ಮಂಥವರು ಮಂತ್ರಿಮಂಡಲದಲ್ಲಿ ಇರಬೇಕೇ ? ನೀವು ಇನ್ನೂ ಅಧಿಕಾರದ ಗದ್ದುಗೆಗೆ ಆಂಟಿಕೊಂಡು ಕೂತಿದ್ದರೆ ನಿಮ್ಮ ಮಂತ್ರಿಮಂಡಲ ದಕ್ಷ ಆಡಳಿತ ನಡೆಸುತ್ತೀರಿ ಎಂದು ಹೇಳುವುದಕ್ಕೆ ಆಗುತ್ತದೆಯೇ ? ನಿಮ್ಮ ಪಕ್ಷದ ಮೇಲೆ ನಿಮ್ಮ ಸಹೋದ್ಯೋಗಿ ಮಂತ್ರಿಗಳ ಮೇಲೆ ಬಂದಿರತಕ್ಕ ಆರೋಪಣೆಗಳಿಗೆ ನೀವು ತಪ್ಪಿತಸ್ಥರಾಗುತ್ತೀರಿ. ದಯಮಾಡಿ ಕೂಡಲೇ ಈ ಪ್ರಕರಣವನ್ನು ಮುಚ್ಚಿಡದೇ ಸಭೆಯಲ್ಲಿ ಸತ್ಯಾಂಶವನ್ನು

(ಶ್ರೀ ವಾಟಾಳ್ ನಾಗರಾಜ್)

ಭಯಲಿಗೆ ಎಳೆಯುಬೇಕು. ಎರಡನೆಯದಾಗಿ ಈಗ ಪರಿಸ್ಥಿತಿ ಏನು ಆಗಿದೆಯೆಂದರೆ ನನಗೆ ತಿಳಿದಿರುವ ಪ್ರಕಾರ ಆಕೆ ಹೊರಗಡೆ ಇದ್ದರೆ ಆಕೆಯಿಂದ ನಿಜಾಂಶ ಹೊರಗಡೆಬಂದು ದೇಶದಲ್ಲಿ ನಮ್ಮ ಬಣ್ಣಬಯಲು ಆಗುತ್ತೆ ಎನ್ನುವ ದೃಷ್ಟಿಯಿಂದ ಸರಕಾರದವರು ಆಕೆಯನ್ನ ಒಳಗಡೆ ಇಟ್ಟಿದ್ದಾರೆ ಎನ್ನುವ ಕೆಲವು ವದಂತಿಗಳು ಬಂದಿವೆ. ದಯವಾಡಿ ಹೇಳಿಕೆ ಇವತ್ತು ಕೊಡುತ್ತೇವೆ. ನಾಳೆ ಕೊಡುತ್ತೇವೆ ಎಂದು ತಪ್ಪಿಸಿಕೊಳ್ಳದೆ ಸಭೆಯಲ್ಲಿ ಕರಾರುವಾಕ್ಕಾಗಿ ಹೇಳಿಕೆಯನ್ನು ಕೊಡಬೇಕು. ಈ ಮಂತ್ರಿಮಂಡಲದಲ್ಲಿ ನೈತಿಕಮಟ್ಟ ಇದ್ದರೆ, ಜವಾಬ್ದಾರಿ ಇದ್ದರೆ. ನಿಮ್ಮ ಮಂತ್ರಿಮಂಡಲಕ್ಕೆ ಒಂದು ಆದರ್ಶ ಇದ್ದರೆ ಕೂಡಲೇ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಡಬೇಕು. ಯಾರೇ ಸಚಿವರು ಇರಲಿ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷೆಗೆ ಗುರಿ ಮಾಡುತ್ತೇವೆಂದು ಹೇಳುವ ದೈರ್ಯ ಗೃಹ ಶಾಖಾ ಮಂತ್ರಿಗಳಿಗೆ ಇದೆಯೇ ? ಈ ಪ್ರಕರಣ ನಡೆದು ಎರಡು ದಿವಸ ಆದರೂ ಸುದ್ದಿ ಬಂದಿಲ್ಲ ಅಂತ ಹೇಳಿದರೆ ಅದಕ್ಕಿಂತ ನಾಚಿಗೆ ಗೇಡು ಬೇರೆ ಇಲ್ಲ. ಈ ರಾಜ್ಯದ 25 ವರ್ಷ ಇತಿಹಾಸದಲ್ಲಿ ಯಾವ ಗೃಹ ಮಂತ್ರಿಗಳೂ ಈ ರೀತಿ ಮಾಡಿರಲಿಲ್ಲ ಎನ್ನುವ ಮಾತನ್ನು ವಿಶಾದದಿಂದ ಹೇಳಬೇಕಾಗಿದೆ. ಶ್ರೀವಾನ್ ಚನ್ನಬಸಪ್ಪನವರು ಹೋಮ್ ಮಿನಿಸ್ಟರ್ ಆಗಿದ್ದಾಗ ಇಂತಹ ಘಟನೆ ನಡೆದಿದ್ದರೆ ಕೇವಲ ೨ ನಿಮಿಷಗಳಲ್ಲಿ ನಡೆದಂಥ ಸುದ್ದಿ ಗೊತ್ತಾಗಿ ಬಿಡುತ್ತಿತ್ತು. ಇದು ಮಂತ್ರಿಮಂಡಲದ ಸಚಿವರ ಸಂಬಂಧವಾಗಿ ನಡೆದಿರತಕ್ಕ ಪ್ರಕರಣ. ಈ ಪ್ರಕರಣ ಗೊತ್ತಿಲ್ಲ ಎಂದು ಹೇಳಿ ಜನತೆಯ ಮುಂದೆ ಮಸಿಬಳಿಸತಕ್ಕ ಉದ್ದೇಶಕ್ಕೆ ಹೋಗುವುದಾದರೆ ಅದು ಒಪ್ಪತಕ್ಕ ಮಾತು ಅಲ್ಲ. ದಯವಾಡಿ ಸಭೆಗೆ ಹೇಳಿಕೆ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣ :—ಚನ್ನಬಸಪ್ಪನವರು, ನಿನ್ನೆ ದಿವಸ ನಾನು ಮಾತನಾಡಿದ ಅವರ ಪಕ್ಷದಲ್ಲಿ ಒಡಕು ತರುವುದಕ್ಕೆ ಯಾತಕ್ಕೆ ಪ್ರಯತ್ನ ಮಾಡುತ್ತೀರಾ ಅಂತ ಹೇಳಿದರು. ಆದರೆ ಚನ್ನಬಸಪ್ಪನವರು ಕಾಂಗ್ರೆಸ್ ಪಾರ್ಟಿಯಲ್ಲಿ ಮಾತನಾಡುತ್ತಾ ನಾನು ಹೇಳಿದ್ದು ಸಬ್‌ಸ್ಟಾನ್‌ಷಿಯಲ್ ನಿಜ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾನು ಹೇಳಿದ್ದನ್ನು ನೀವೇ ಒಪ್ಪಿಕೊಂಡಿದ್ದೀರಿ. ಸಂತೋಷ. ಸಬ್‌ಸ್ಟಾನ್‌ಷಿಯಲ್ ಟ್ರೂ ಎಂದು ನೀವೇ ಹೇಳಿದ ಮೇಲೆ ಅದನ್ನು ಸ್ಪಷ್ಟವಾಗಿ ಸಭೆಗೆ ತಿಳಿಸಿ. ದಿನ ಯಾತಕ್ಕೆ ತಳ್ಳುತ್ತೀರಿ. ಇಂದು ಎರಡು—ಮೂರು ದಿನ ತಳ್ಳುವ ವಿಷಯವಲ್ಲ. ನಿಮ್ಮ ಮಾನ ಕಾಸಿಗೆ ಹರಾಜು ಮಾಡಿಕೊಂಡಿದ್ದೀರಿ. ಇನ್ನು ಎರಡು ಕಾಸಿಗೆ ಹರಾಜು ಆಗುವ ಪರಿಸ್ಥಿತಿ ಬರುತ್ತದೆ. ಕಾಸು ಇಲ್ಲದೇ ಹರಾಜು ಆಗುತ್ತದೆ. ದಿಂಡಿಗಲ್‌ನಲ್ಲಿ ತೀರ್ಮಾನ ಮಾಡಿದ ಹಾಗೆ ಜನ ನಿಮ್ಮ ಬಗ್ಗೆ ತೀರ್ಮಾನ ಮಾಡುತ್ತಾರೆ. ಸ್ಪಷ್ಟವಾದ ಹೇಳಿಕೆಯನ್ನು ಕೊಡಿ ಅಂತ ಹೇಳುತ್ತೇನೆ.

Sri D. Deveraja Urs. (Chief Minister):—The other day I said that I would make a statement after making enquiries. I am going to make the statement tomorrow.

---

## MYSORE STATE CIVIL SERVICES (REGULATION OF PROMOTION PAY AND PENSION) BILL, 1973 MOTION TO CONSIDER.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):—ನಾನು ನಿನ್ನೆ ಮಾತನಾಡುವಾಗ, ಈ ಬಡ್ತಿ ಕ್ರಮವನ್ನು ಮಾಡತಕ್ಕ ಕೆಲಸದಲ್ಲಿ ಹಿಂದಿನ ಪ್ರಮುಖ ಅಧಿಕಾರಿಗಳ ಅಚಾತುರ್ಯದಿಂದ ರಾಜ್ಯದ ಬೊಕ್ಕಸಕ್ಕೆ 5 ಕೋಟಿ ರೂಪಾಯಿನಷ್ಟು ನಷ್ಟವಾಗುವ ಪ್ರಶ್ನೆ ಬಂದಿದೆ ಎಂದು ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಒಂದು ಕ್ರಮವನ್ನು ಅನುಸರಿಸದೇ ನಿಯಮಾವಳಿಗಳನ್ನು ಅನುಸರಿಸದೇ ಬಡ್ತಿ ಮಾಡಿ ಇವತ್ತು ಅನಾವಶ್ಯಕವಾಗಿ ನೌಕರರು ಕೋರ್ಟಿಗೆ ಹೋಗಿ ಪರಿಹಾರ ಪಡೆಯುವ ಸಂದರ್ಭ ಒಂದಿದೆ. ಮೆಡಿಕಲ್ ಕಾಲೇಜುಗಳಲ್ಲಿ ಇದ್ದಂಥಾ ಎಲ್ಲಾ ವಿಭಾಗದ ನೌಕರರ ಬಡ್ತಿ ವಿಷಯದಲ್ಲಿ ಇವತ್ತು ಸಾಕಾದಷ್ಟು ಅನ್ಯಾಯವಾಗಿದೆ ಎನ್ನುವ ವಿಷಯವನ್ನು ನನ್ನ ಗಮನಕ್ಕೆ ತಂದರು. ನಾನು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಮೆಡಿಕಲ್ ಕಾಲೇಜುಗಳಲ್ಲಿ ಮಾಡಿದಂಥ ಸೀನಿಯಾರಿಟಿ ಲಿಸ್ಟನ್ನು ವಜಾ ಮಾಡಿ ಹೊಸ ಸೀನಿಯಾರಿಟಿ ಲಿಸ್ಟ್ ಮಾಡಬೇಕೆಂದು ಇಲಾಖೆಗೆ ಕಳುಹಿಸಿದ್ದೇವೆ. ಈ ಮಧ್ಯದಲ್ಲಿ ಪೋಸ್ಟ್‌ಗಳನ್ನೂ ಖಾಲಿ ಬಿಡುವುದಕ್ಕೆ ಆಗುವುದಿಲ್ಲ ಅವುಗಳಿಗೆ ಟೆಂಪರರಿ ಆಗಿ ಬಡ್ತಿ ಕೊಟ್ಟು ಫಿಲ್ ಅಪ್ ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ಏನು ಆಗುತ್ತದೆಂದು ಹಂಗಾಮಿಯಾಗಿ ಯಾರಿಗಾದರೂ ಬಡ್ತಿ ಕೊಟ್ಟು ಮೇಲಿನ ಹುದ್ದೆಗೆ ನೇಮಿಸಿದರೆ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಆ ಹುದ್ದೆಗೆ ಅರ್ಹರೆಂದು ಪರಿಗಣಿಸಿದರೆ ಅವರು ವಾಪಸ್ಸು ಬರಬೇಕಾಗುತ್ತದೆ.

ಈಗ ಒಂದು ಸಾರಿ ಮೇಲೆ ಹೋದವರು ವಾಪಸ್ ಬರುವುದಿಲ್ಲ. ಆದುದರಿಂದ ಎಲ್ಲಿಯವರೆಗೆ ಸೀನಿಯಾರಿಟಿ ಲಿಸ್ಟ್ ಫೈನಲ್ ಆಗುವುದಿಲ್ಲವೋ, ಅಲ್ಲಿಯವರೆಗೆ ಹಂಗಾಮಿಯಾಗಿ ಆಗಲಿ, ಇನ್ನು ಯಾವುದೇ ವಿಧದಲ್ಲಿ ಆಗಲಿ ಪೋಸ್ಟ್ಸ್ ಖಾಲಿ ಇವೆ ಎನ್ನುವ ಕಾರಣದಿಂದ ಬಡ್ತಿ ಕೊಡುವ ಕೆಲಸ ನಿಲ್ಲಿಸಬೇಕು. ಬಡ್ತಿ ಕೊಡುವ ಸಂದರ್ಭದಲ್ಲಿ ಪ್ರಭಾವ ಉಪಯೋಗಿಸಿ ಮೇಲಕ್ಕೆ ಬರುವುದಕ್ಕೆ ಅವಕಾಶ ಇದೆ. ಬಡ್ತಿ ಯಾರಿಗೆ ಕೊಟ್ಟಿದ್ದೀರಿ, ಆತನನ್ನು ವಾಪಸ್ ಹಿಂದಕ್ಕೆ ಕಳುಹಿಸಿ, ಇನ್‌ಚಾರ್ಜ್ ಮಾಡಿ, ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.